**೩. <u>ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ: ಕಲಂ ೪ (೧) (ಬಿ) ((III)</u>**

ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಪರಿಷತ್ತಿನ ವತಿಯಿಂದ ನಡೆಸಲಾಗುವ ದತ್ತಿ ಪ್ರಶಸ್ತಿ ಸಾಹಿತಿಗಳ ಜನ್ಮ ದಿನಾಚರಣೆಗಳು, ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಗಳು, ರಾಷ್ಟ್ರೀಯ ದಿನಾಚರಣೆಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ದಿನಾಚರಣೆ ಹಾಗೂ ಇತರ ದಿನಾಚರಣೆಗಳನ್ನು ಮತ್ತು ಕನ್ನಡ ರಾಜ್ಯೋತ್ಸವ ದಿನಾಚರಣೆ, ಜಯಂತಿಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳು ಮತ್ತು ಕೇಂದ್ರ ಪರಿಷತ್ತಿನ ಮಾರ್ಗಸೂಚಿಯನ್ವಯ ನಡೆಸಲಾಗುತ್ತದೆ. ಸಿಬ್ಬಂದಿ ಶಾಖೆ, ಲೆಕ್ಕಪತ್ರ ಶಾಖೆ, ಪ್ರಕಟಣಾ ಶಾಖೆ, ಸಾದಿಲ್ವಾರು ಖರ್ಚು ಮತ್ತು ಕೇಂದ್ರ ಪರಿಷತ್ತಿನ ಕಾಮಗಾರಿಗಳು, ಅಚ್ಚುಕೂಟ ವಿಭಾಗ ಮತ್ತು ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ/ಅಕ್ಕಮಹಾದೇವಿ/ಕುವೆಂಪು ಸಭಾಂಗಣ ಇವುಗಳಲ್ಲಿ ಕಾರ್ಯಕ್ರಮ ನಡೆಸಲು ಸಭಾ ಮಂಟಪದ ಅಪೇಕ್ಷಾ ಪತ್ರದೊಂದಿಗೆ ಕಾಯ್ದಿರಿಸಲು, ವಿಷಯ ನಿರ್ವಾಹಕರು ಕಡತವನ್ನು ತಯಾರಿಸಿ ಪ್ರಭಾರ ವ್ಯವಸ್ಥಾಪಕರು ಮತ್ತು ಪದಾಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ. ಇವರುಗಳು ನೀಡುವ ಅಭಿಪ್ರಾಯವನ್ನು ಪರಿಶೀಲಿಸಿ ಅಧ್ಯಕ್ಷರು ಅಂತಿಮ ತೀರ್ಮಾನವನ್ನು ಕೈಗೊಳ್ಳುತ್ತಾರೆ.